**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

***ಸಿ.ಸಿ. ಸಂಖ್ಯೆಃ 503/2023***

ಹೆಸರುಃ ಚಂದ್ರಶೇಖರ್ ಎ ಎನ್ ಸಿ.ಡಬ್ಲ್ಯೂಃ 1

ವಯಸ್ಸುಃ 49 ಪಿ.ಡಬ್ಲ್ಯೂಃ 1

ತಂದೆಃ ನರಸಿಂಹನಾಯಕ್

ಉದ್ಯೋಗಃ ಪಿಐ ಕರ್ನಾಟಕ ಲೋಕಾಯುಕ್ತ , ಮಂಗಳೂರು ,

ವಾಸ ಸ್ಥಳಃ ಮಂಗಳೂರು

ಸಾಕ್ಷಿಗೆ ದಿನಾಂಕಃ 20.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

ದಿಃ 05-10-2021 ರಿಂದ 16-07-2023 ರವರೆಗೆ ಪಿ ಎಸ್ ಐ ಚನ್ನಗಿರಿ ಪೋ.ಠಾ. ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-06-2022 ರಂದು ಮದ್ಯಾಹ್ನ 03.00 ಗಂಟೆಗೆ ಚಾಸಾ 4 ಮತ್ತು 5 ರವರೊಂದಿಗೆ ತಾವರಕೆರೆ ಗ್ರಾಮದ ಗಸ್ತಿನ ಕರ್ತವ್ಯ ನಿರ್ವಹಿಸುತ್ತಿದ್ದಾಗ 3-15 ರ ಸಮಯದಲ್ಲಿ ಸಿಬ್ಬಂದಿಯಾದ ಚಾಸಾ 4 ರವರಿಗೆ ದುರ್ವಿಗೆರೆ ಗ್ರಾಮದ ಕಡೆಯಿಂದ ಒಂದು ವಾಹನದಲ್ಲಿ ಅಕ್ರಮವಾಗಿ ಹಾಗೂ ಹಿಂಸಾತ್ಮಕವಾಗಿ ಜಾನುವಾರುಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಬಾತ್ಮಿದಾರರ ಮಾಹಿತಿಯ ಮೇರೆಗೆ ಸದರಿ ಮಾಹಿತಿಯನ್ನು ನನಗೆ ತಿಳಿಸಿರುತ್ತಾರೆ.

ನಂತರ ನಾನು ಚಾಸಾ 4 ಮತ್ತು 5 ರವರು ವೀರಾಪುರ ಗ್ರಾಮದಿಂದ ದುರ್ವಿಗೆರೆ ಗ್ರಾಮದ ಕಡೆಗೆ ಹೋಗುವ ರಸ್ತೆಯಲ್ಲಿ ಮಾಹಿತಿ ಬಂದ ಮೇರೆಗೆ ಮಧ್ಯಾಹ್ನ 3-30 ರ ಗಂಟೆ ಸಮಯದಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಒಂದು ಟಾಟಾ ಏಸ್ ವಾಹನ ದುರ್ವಿಗೆರೆ ಕಡೆಯಿಂದ ಜಾನುವಾರುಗಳನ್ನು ಸಾಗಿಸುತ್ತಿರುವುದು ಕಂಡು ಬಂದಿರುತ್ತದೆ. ನಂತರ ನಾನು ಮತ್ತು ಚಾಸಾ 4 ಮತ್ತು 5 ರವರು ಸದರಿ ವಾಹನದ ಚಾಲಕನಿಗೆ ಜಾನುವಾರುಗಳನ್ನು ಸಾಗಾಣಿಕೆ ಮಾಡಲು ಪರವಾನಿಗೆ ಹಾಗೂ ಪಶು ವೈದ್ಯಾಧಿಕಾರಿಗಳ ಪ್ರಮಾಣ ಪತ್ರ ಇದೆಯೇ ಎಂದು ಕೇಳಿದಾಗ, ಚಾಲಕ ಯಾವುದೇ ಪರವಾನಿಗೆ ಹಾಗೂ ಪ್ರಮಾಣ ಪತ್ರ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ತಕ್ಷಣ ಸದರಿ ವಾಹನ ಮತ್ತು

ಜಾನುವಾರುಗಳನ್ನು ವಶಕ್ಕೆ ಪಡೆಯುವ ಸಲುವಾಗಿ ಚಾಸಾ 4 ರವರಿಗೆ ಪಂಚರನ್ನು ಕರೆತರುವಂತೆ ಸೂಚಿಸಿರುತ್ತೇನೆ. ಅದರಂತೆ ಚಾಸಾ 4 ರವರು ಸ್ಥಳೀಯ ವ್ಯಕ್ತಿಗಳಾದ ಚಾಸಾ 2 ಮತ್ತು 3 ರವರನ್ನು ಹಾಜರುಪಡಿಸಿರುತ್ತಾರೆ. ನಂತರ ಚಾಸಾ 2 ಮತ್ತು 3 ರವರಿಗೆ ಮಾಹಿತಿಯನ್ನು ತಿಳಿಸಿ ನೋಟೀಸ್ ಜಾರಿ ಮಾಡಿರುತ್ತೇನೆ.

ನಂತರ ಚಾಸಾ 2 ಮತ್ತು 3 ರವರ ಸಮಕ್ಷಮ ವಾಹನ ಚಾಲನೆ ಮಾಡುತ್ತಿದ್ದ ಹಾಗೂ ಜೊತೆಯಲ್ಲಿದ್ದ ವ್ಯಕ್ತಿಗಳ ಹೆಸರು ವಿಳಾಸ ಕೇಳಲಾಗಿ , ಹಜರುದ್ದಿನ್ ತಂದೆ ಫಯಾಜುದ್ದಿನ್ , 31 ವರ್ಷ ವಾಹನದ ಚಾಲಕ, ಹೊನ್ನೆಬಾಗಿ ವಾಸಿ ಎಂದು ಹಾಗೂ ಜೊತೆಯಲ್ಲಿದ್ದ ಇನ್ನೊಬ್ಬರ ಹೆಸರು ಫಯಾಜುಲ್ಲಾ ತಂದೆ ಮೊಹಮದ್ ಉಸ್ಮಾನ್ ಸಾಬ್ , 38 ವರ್ಷ, ಹೊನ್ನೆಬಾಗಿ ವಾಸಿ ಎಂದು ತಿಳಿಸಿರುತ್ತಾರೆ.

ನಂತರ ಸದರಿ ವಾಹನದ ನೋಂದಣಿ ಸಂಖ್ಯೆ ಪರಿಶೀಲಿಸಲಾಗಿ ಕೆಎ 18 ಎ 8523 ನೇ ಟಾಟಾ ಏಸ್ ಗೂಡ್ಸ್ ವಾಹನ ಆಗಿತ್ತು. ಸದರಿ ವಾಹನವು ಹಳದಿ ಹಾಗೂ ಬಿಳಿ ಬಣ್ಣದಿಂದ ಕೂಡಿರುತ್ತದೆ. ನಂತರ ವಾಹನದ ಹಿಂಬದಿಯಲ್ಲಿ ಒಟ್ಟು 03 ಹೋರಿಗಳು ಇದ್ದು ಅವುಗಳಲ್ಲಿ ಎರಡು ಕಪ್ಪು ಬಣ್ಣದ ಹೋರಿಗಳಾಗಿದ್ದು ಒಂದು ಕಪ್ಪು ಹಾಗೂ ಬಿಳಿ ಮಿಶ್ರಿತ ಹೋರಿ ಇರುವುದು ಕಂಡು ಬಂದಿರುತ್ತದೆ. ನಂತರ ಅವುಗಳನ್ನು ಎಲ್ಲಿಂದ ತೆಗೆದುಕೊಂಡು ಬಂದಿರುವುದಾಗಿ ಪ್ರಶ್ನಿಸಿದಾಗ ಅಜ್ಜಂಪುರ ತಾಲ್ಲೂಕು ಮುದಗುಂಡಿ ಗ್ರಾಮದ ರೈತರಿಂದ ಕಡಿಮೆ ಬೆಲೆಗೆ ದನಗಳನ್ನು ಖರೀದಿಸಿ ಹೆಚ್ಚಿನ ಬೆಲೆಗೆ ಖಸಾಯಿ ಖಾನೆಗೆ ಮಾರಾಟ ಮಾಡಲೆಂದು ಖರೀದಿ ಮಾಡಿಕೊಂಡು ಸಾಗಾಣಿಕೆ ಮಾಡುತ್ತಿರುದಾಗಿ ನುಡಿದಿರುತ್ತಾರೆ. ಹೋರಿಗಳನ್ನು ಸದರಿ ವಾಹನದಲ್ಲಿ ಹಿಂಸಾತ್ಮಕವಾಗಿ ತುಂಬಿರುವುದು ಕಂಡು ಬಂದಿರುತ್ತದೆ.

ನಂತರ 3-45 ರಿಂದ 5-00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ನಾನು ಅಮಾನತು ಪಂಚನಾಮೆಯನ್ನು ಜರುಗಿಸಿ ವಾಹನ ಹಾಗೂ 03 ಹೋರಿಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಚಾಸಾ 5 ರವರು ಟೈಪ್ ಮಾಡಿದ್ದು ನಾವು ಸ್ಥಳದಲ್ಲೇ ಸಹಿ ಹಾಕಿರುತ್ತೇವೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ನಿಪಿ 1 ಹಾಗೂ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು.

ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ 3 ಭಾವಚಿತ್ರಗಳನ್ನು ತೆಗೆಸಿರುತ್ತೇನೆ.

ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ 2 ರಿಂದ 4 ಎಂದು ಗುರುತಿಸಲಾಯಿತು.

ನಂತರ ಅಮಾನತುಪಡಿಸಿಕೊಂಡ 03 ಹೋರಿಗಳನ್ನು ತಾವರಕೆರೆಯ ಪಶು ವೈದ್ಯಕೀಯ ಕೇಂದ್ರಕ್ಕೆ ವೈದ್ಯಕೀಯ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿರುತ್ತೇನೆ. ಸದರಿ ಸಮಯದಲ್ಲಿ ವೈದ್ಯರಿಗೆ ತಪಾಸಣೆ ಮಾಡುವಂತೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಹಾಗೂ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ನಿಪಿ 5 ಹಾಗೂ ಸಹಿಯನ್ನು ನಿಪಿ 5 (ಎ) ಎಂದು ಗುರುತಿಸಲಾಯಿತು.

ನಂತರ ಸಂಜೆ 6-00 ಗಂಟೆಗೆ ಠಾಣೆಗೆ ಹಾಜರಾಗಿ ಅಮಾನತುಪಡಿಸಿಕೊಂಡು ಟಾಟಾ ಏಸ್ ವಾಹನ ಹಾಗೂ 3 ಹೋರಿಗಳನ್ನು, ಪಂಚನಾಮೆ ಸಮೇತ ವರದಿಯನ್ನು ತಯಾರಿಸಿ ಮುಂದಿನ ತನಿಖೆಗಾಗಿ ಚಾಸಾ 8 ರವರಿಗೆ ನೀಡಿರುತ್ತೇನೆ. ಸದರಿ ವರದಿಯನ್ನು ಹಾಗೂ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ನಿಪಿ 6 ಹಾಗೂ 6(ಎ) ಎಂದು ಗುರುತಿಸಲಾಯಿತು.

ನಂತರ ದಿಃ 15-10-2022 ರಂದು ನಾನು ದಿಃ 12-10-2022 ರ ಹೊನ್ನಾಳಿ ಉಪವಿಭಾಗಾಧಿಕಾರಿಗಳ ಆದೇಶದಂತೆ ದಿಃ 13-06-2022 ನಿಪಿ 1 ರಂತೆ ಅಮಾನತುಪಡಿಸಿಕೊಂಡ ವಾಹನವನ್ನು ಪಂಚರಾದ ಮೊಹಮದ್ ಮುಕ್ತಿಯಾರ್ ಹಾಗೂ ಮೊಹಮದ್ ಖಲೀಮುಲ್ಲಾರವರ ಸಮಕ್ಷಮ ಮಾಲೀಕರ ವಶಕ್ಕೆ ಬಿಟ್ಟುಕೊಟ್ಟಿರುತ್ತೇನೆ. ಪಂಚನಾಮೆಗೆ ಮಾಲೀಕರ ಹಾಗೂ ಪಂಚನಾಮೆ ಸಾಕ್ಷಿದಾರರ ಸಹಿಗಳನ್ನು ಪಡೆದಿರುತ್ತೇನೆ. ಸದರಿ ವಾಹನ ಬಿಡುಗಡೆ ಪಂಚನಾಮೆಯನ್ನು ಹಾಗೂ ಭಾವಚಿತ್ರಗಳನ್ನು ಸಹಿಯೊಂದಿಗೆ ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ನಿಪಿ 7 ಹಾಗೂ 7(ಎ) ಹಾಗೂ 8 ಹಾಗೂ 9 ಎಂದು ಗುರುತಿಸಲಾಯಿತು.

ಬಿಡುಗಡೆಗೊಳಿಸಿದ ವಾಹನವನ್ನು ಸಾಕ್ಷಿಯು ನಿಪಿ 8 ಮತ್ತು 9 ರಲ್ಲಿ ಕಾಣುವಂತೆ ಗುರುತಿಸಿದ್ದು ಸದರಿ ವಾಹನವು ಮಾಲೀಕರ ಸುಪರ್ದಿಯಲ್ಲಿರುತ್ತದೆ. ಅಮಾನತುಪಡಿಸಿಕೊಂಡ ಹೋರಿಗಳನ್ನು ನಿಪಿ 4 ರಲ್ಲಿ ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಮಧ್ಯಾಹ್ನ ಸುಮಾರು 2-00 ಗಂಟೆ ಸಮಯದಲ್ಲಿ ಗಸ್ತು ಕರ್ತವ್ಯಕ್ಕಾಗಿ ಚನ್ನಗಿರಿ ಠಾಣೆಯಿಂದ ಹೋಗಿರುತ್ತೇವೆ. ವೀರಾಪುರ ಗ್ರಾಮಕ್ಕೆ ಹೋದಾಗ ಮಧ್ಯಾಹ್ನ 3-30 ಗಂಟೆ ಸಮಯ ಆಗಿತ್ತು. ವೀರಾಪುರದಿಂದ ದುರ್ವಿಗೆರೆ 10 ಕಿ.ಮೀಟರ್ ಅಂತರ ಇರುತ್ತದೆ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಮಾರು 5-6 ಕಿ.ಮಿ ಇರಬಹುದು ಎಂದು ನುಡಿಯುತ್ತಾರೆ. ತಾವರಕೆರೆ ತಲುಪಲು ಎರಡು ರಸ್ತೆಗಳು ಇರುತ್ತವೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ತಾವರಕೆರೆಯಿಂದ ವೀರಾಪುರ ದುರ್ವಿಗೆರೆ ಕಡೆಯಿಂದ ಬುಕ್ಕಾಂಬುದಿಯಿಂದ ಅಜ್ಜಂಪುರ ತಲುಪಬಹುದು ಹಾಗೂ ಬುಕ್ಕಾಂಬುದಿಯಿಂದ ತಾವರಕೆರೆಗೆ ನೇರವಾಗಿ ಮತ್ತೊಂದು ರಸ್ತೆ ಇದೆ ಎಂದರೆ ಇರಬಹುದು.

ಗಸ್ತು ಕರ್ತವ್ಯದಲ್ಲಿರುವಾಗ ಮಾಹಿತಿ ಚಾಸಾ 4 ರವರಿಗೆ ಬಂದಿರುತ್ತದೆ. ಅಮಾನತುಪಡಿಸಿಕೊಂಡ ವಾಹನದ ಮೇಲೆ ಅಕ್ಷರಗಳಿಂದ ಬರೆದಿರುತ್ತಾರೆ. ಉಪವಿಭಾಗಾಧಿಕಾರಿಯ ಆದೇಶದಂತೆ ಅಮಾನತುಪಡಿಸಿಕೊಂಡ ವಾಹನವನ್ನು ಬಿಡುಗಡೆಗೊಳಿಸಿರುತ್ತೇನೆ. ಪಂಚನಾಮೆ ಕಾಲಕ್ಕೆಭಾವಚಿತ್ರಗಳನ್ನು ತೆಗೆದಿರುತ್ತೇವೆ ಯಾವುದೇ ಛಾಯಗ್ರಹಣ ಮಾಡಿರುವುದಿಲ್ಲ.

ಹೋರಿಗಳನ್ನು ವೈದ್ಯಕೀಯ ಪರೀಕ್ಷೆಗೆ ತಾವರಕೆರೆ ವೈದ್ಯಾಧಿಕಾರಿಗಳ ಬಳಿ ಕರೆದುಕೊಂಡು ಹೋದಾಗ ಸಮಯ ಸುಮಾರು ಸಂಜೆ 5-15 ಗಂಟೆ ಆಗಿರಬಹುದು . ಚಾಸಾ 4 ರವರಿಗೆ ಪಂಚನಾಮೆ ಸಾಕ್ಷಿದಾರರ ನೋಟೀಸನ್ನು ಕಳುಹಿಸಿದ್ದು ಸಾಕ್ಷಿದಾರರಿಗೆ ಅವರ ಮೂಲಕ ಜಾರಿ ಮಾಡಿಸಿರುತ್ತೇನೆ. ನೋಟೀಸ್ ಕೊಡುವ ಕಾಲಕ್ಕೆ ಸಮಯ 3-30 ಗಂಟೆ ಆಗಿರುತ್ತದೆ. ಪಂಚರು ಸ್ಥಳಕ್ಕೆ 5-10 ನಿಮಿಷದ ಒಳಗೆ ಬಂದಿರುತ್ತಾರೆ. ಘಟನಾ ಸ್ಥಳಕ್ಕೂ ಪಂಚರ ವಾಸ ಸ್ಥಳಕ್ಕೂ 15 ಕಿ. ಮಿ. ನ ಅಂತರ ಇರುತ್ತದೆ ಎಂದರೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ.

ಘಟನಾ ದಿನದಂದು ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸದೇ ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

sd/-

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**